ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ ಈಲ್ಡ್ ಆಗಬೇಕು. ಟಾಡಾ ಕಾಯಿದೆ ಆದೇಶವನ್ನು ಹೊರಡಿಸಿದ್ದೀರಾ ? ಅದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಶಾಸಕರಾಗಿದ್ದ ಶ್ರೀ ಗುಜ್ಜಾಲ್‌ಹನುಮಂತಪ್ಪನವರು ನಿಧನ ಹೊಂದಿದ ಪ್ರಯುಕ್ತ ದಿನಾಂಕ ೧೯-೧೧-೧೯೯೦ರಂದು ಸಭೆಯ ಮುಂದಿದ್ದ ಯಾವ ಕಾರ್ಯಕಲಾಪಗಳನ್ನು ನಡೆಸದೆ ಸಭೆಯನ್ನು ಮುಂದೂಡಲಾಯಿತು. ಆದಕಾರಣ ನಿನ್ನೆಯ ದಿವಸ ಪಟ್ಟಿ ಮಾಡಲಾಗಿದ್ದ ಒಂದನೇ ಪಟ್ಟಿಯಲ್ಲಿದ್ದ ಚುಕ್ಕೆ ಗುರ್ತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನೂ ಉತ್ತರಗಳೊಂದಿಗೆ ಸಭೆಯ ಮುಂದೆ ಮಂಡಿಸುತ್ತೇನೆ.

ಜಿಲ್ಲಾ ಪರಿಷತ್ ಹಾಗೂ ಮಂಡಲ್ ಪಂಚಾಯಂತ್ ಕಾಯ್ದೆಗೆ ತಿದ್ದುಪಡಿ.

೫೫. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪರಿಷತ್ ಹಾಗೂ ಮಂಡಲ್ ಪಂಚಾಯತ್ ಕಾನೂನಿಗೆ ತಿದ್ದುಪಡಿ ತರುತ್ತಿರುವುದು ನಿಜವೇ ?

ಆ) ಕಾನೂನಿನ ಬದಲಾವಣೆಯಿಂದ ಪಂಚಾಯತ್ ರಾಜ್ ವ್ಯವಸ್ಥೆಗೆ ಆಗುವ ಲಾಭ ಹಾಗೂ ಹಾನಿ ಏನು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ಸಚಿವರು).—

ಅ) ನಿಜ.

ಆ) ಪಂಚಾಯತ್ ರಾಜ್ ವ್ಯವಸ್ಥೆಯ ಕಾರ್ಯವನ್ನು ಹೆಚ್ಚು ಅರ್ಥಪೂರ್ಣ ಹಾಗೂ ಪರಿಣಾಮಕಾರಿಯಾಗಿ ಮಾಡಲು ತಿದ್ದುಪಡಿಗಳನ್ನು ತರಲಾಗುತ್ತಿದೆ.

ಜಿಲ್ಲಾ ಪರಿಷತ್ತುಗಳಿಂದ ವಾರ್ಷಿಕ ವರದಿಗಳನ್ನು ಸಲ್ಲಿಸುವುದು

೧೫೯. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಎಲ್ಲಾ ಜಿಲ್ಲಾಪರಿಷತ್ತುಗಳು ವಾರ್ಷಿಕ ವರದಿಯನ್ನು ಜಿಲ್ಲಾ ಪರಿಷತ್ತುಗಳು ಪ್ರಾರಂಭವಾದಾಗಲಿಂದ ಅವುಗಳನ್ನು ವಿಧಾನ ಮಂಡಲಕ್ಕೆ ಸಲ್ಲಿಸಲು ಸರ್ಕಾರಕ್ಕೆ ಸಲ್ಲಿಸಿವೆಯೇ ?

ಆ) ವಾರ್ಷಿಕ ವರದಿ ಸಲ್ಲಿಸದೆ ಇದ್ದ ಜಿಲ್ಲಾ ಪರಿಷತ್ತುಗಳ ಹೆಸರುಗಳೇನು?

ಇ) ಇಂತಹ ಜಿಲ್ಲಾಪರಿಷತ್‌ಗಳಿಂದ ವಾರ್ಷಿಕ ವರದಿ ತರಿಸಲು ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೧೭ ಜಿಲ್ಲಾ ಪರಿಷತ್ತಿನ ೧೯೮೭-೮೮ನೇ ಸಾಲಿನ ವಾರ್ಷಿಕ ವರದಿಗಳನ್ನು ವಿಧಾನ ಮಂಡಲಕ್ಕೆ ಕಳುಹಿಸಲಾಗಿದೆ.

ಆ) ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ.

ಇ) ಕೊಡಲೇ ಕಳುಹಿಸುವಂತೆ ಕೋರಿ ಟೆಲೆಕ್ಸ್ ಸಂದೇಶ ಕಳುಹಿಸಲಾಗಿದೆ.

ಬೆಂಗಳೂರು ಜಿಲ್ಲಾ ಪರಿಷತ್‌ನವರಿಂದ ವೆಚ್ಚ ಮಾಡಿದ ಮೊಬಲಗು

೧೦೦. ಶ್ರೀ ಸಾದತ್ ಅಲಿಕಾನ್ (ಚನ್ನಪಟ್ಟಣ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರ ಖರ್ಚು ಮಾಡಿರುವ ಹಣ ಎಷ್ಟು ?

(ಲೆಕ್ಕ ಶೀರ್ಷಿಕೆ ಮತ್ತು ಇಲಾಖಾವಾರು ಮಾಹಿತಿಯನ್ನು ಒದಗಿಸತಕ್ಕದ್ದು)